ವರದಕ್ಷಿಣೆಯನ್ನು ರದ್ದುಗೊಳಿಸುವುದು.

724 ಶ್ರೀ ಎಂ.ಎಚ್. ಜಯಪ್ರಕಾಶ್ ನಾರಾಯಣ್ (ಸಿರ್ಸಿ).— ಗ್ರಾಮಾಭಿವೃದ್ಧಿ ಹಾಗೂ ಸಮಾಜ ಕಲ್ಯಾಣ ಮಂತ್ರಿಗಳು ಈ ವಿಷಯವನ್ನು ದಯೆಯಿಟ್ಟು ತಿಳಿಸುವರೆ. —

ವರದಕ್ಷಿಣೆ ಎಂಬ ಸಾಮಾಜಿಕ ಅನ್ಯಾಯವನ್ನು ನಿಲ್ಲಿಸಲು ಸರಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎನ್. ರಾಚಯ್ಯ (ಗ್ರಾಮಾಭಿವೃದ್ಧಿ ಹಾಗೂ ಸಮಾಜ ಕಲ್ಯಾಣ ಮಂತ್ರಿಗಳು).— ರಾಜ್ಯ ಸರಕಾರವು ಯಾವ ಯೋಜನೆಯನ್ನೂ ಕೈಗೊಂಡಿಲ್ಲ.

ಶ್ರೀ ಎಂ.ಎಚ್. ಜಯಪ್ರಕಾಶ್ ನಾರಾಯಣ್.— ಸಾಮಾಜಿಕ ಅನ್ಯಾಯಗಳಲ್ಲಿ ಇದೂ ಸಹ ಒಂದು ಎಂಬುದನ್ನು ಸರ್ಕಾರ ಭಾವಿಸುತ್ತದೆಯೆ?

† ಶ್ರೀ ಎನ್. ರಾಚಯ್ಯ.— ರಾಜ್ಯಸರ್ಕಾರವಷ್ಟೇ ಅಲ್ಲ, ಕೇಂದ್ರಸರ್ಕಾರವೂ ಸಹ 1961ನೇ ಇಸವಿಯಲ್ಲಿ ಇದು ಸಮಾಜದಲ್ಲಿ ಒಂದು ಕಳಂಕಪ್ರಾಯವಾಗಿದೆ ಎಂದುಕೊಂಡು ಡೌರಿ ಪ್ರೊಹಿಬಿಷನ್ ಆಕ್ಟ್ 1961 ಎಂಬತಕ್ಕಂಥ ಕಾನೂನನ್ನು ಜಾರಿಯಲ್ಲಿ ತಂದರು. ಆದು ಈಗ ಜಾರಿಯಲ್ಲಿದೆ. ಮತ್ತು ಅದನ್ನು ತೀವ್ರಗತಿಯಿಂದ ಜಾರಿಗೆ ತಂದಿದ್ದೇ ಆದರೆ, ಇದನ್ನು ತೊಡೆದು ಹಾಕಬಹುದು ಎಂಬುದೇ ಸರ್ಕಾರದ ಅಭಿಪ್ರಾಯವಾಗಿದೆ.

ಶ್ರೀ ಎಂ.ಎಚ್. ಜಯಪ್ರಕಾಶ್ ನಾರಾಯಣ್.— ಸಮಾಜಿಕ ನ್ಯಾಯವಿರಬೇಕೆಂದು ಹೇಳತಕ್ಕಂಥ ಮೂಲ ತತ್ವವನ್ನು ನಾವು ಒಪ್ಪಿಕೊಂಡಿರುವಾಗ, ಈ ವರದಕ್ಷಿಣೆ ತೆಗೆದುಕೊಳ್ಳುವುದು ಸಾಮಾಜಿಕ ಅನ್ಯಾಯವೆಂದು ಸರ್ಕಾರ ಪರಿಗಣಿಸಿ, ಇದರ ಮೇಲೆ ಅಧ್ಯಯನ ನಡೆಸಿ, ಆ ಮೂಲಕ ಒಂದು ವರದಿಯನ್ನು ಪಡೆದುಕೊಳ್ಳಲು ಒಂದು ಸಮಿತಿಯನ್ನು ನೇಮಕ ಮಾಡುತ್ತೀರಾ?

ಶ್ರೀ ಎನ್. ರಾಚಯ್ಯ.— ಸರ್ಕಾರ ಆದನ್ನು ಯೋಚನೆ ಮಾಡುತ್ತದೆ.

ಶ್ರೀ ಸಿ. ಬೈರೇಗೌಡ.— ಈಗತಾನೆ ತಾವು ಸೆಂಟ್ರಲ್ ಡೌರಿ ಪ್ರೊಹಿಬಿಷನ್ ಆಕ್ಟ್ ಜಾರಿಯಲ್ಲಿದೆ ಎಂದು ಹೇಳಿದಿರಿ; ಆ ಆಕ್ಟ್ ಪ್ರಕಾರ ಇಲ್ಲಿಯವರೆಗೆ ಎಷ್ಟು ಅಪರಾಧಗಳನ್ನು ಪತ್ತೆ ಹಚ್ಚಿದ್ದೀರಿ ಮತ್ತು ಅಂತವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎನ್. ರಾಚಯ್ಯ.— ಕಾರ್ಯಕ್ರಮ ಕ್ಕೆಕೊಂಡಿರತಕ್ಕಂಥ ಉದಾಹರಣೆಗಳಿವೆ ಆ ಬಗ್ಗೆ ನೋಟೀಸ್ ಕೊಟ್ಟರೆ ಮಾಹಿತಿಯನ್ನು ತರಿಸಿಕೊಡುತ್ತೇನೆ.

ಶ್ರೀ ಕೆ.ಎಂ. ನಾಗಣ್ಣ.— ಜನತೆ ಎಲ್ಲಿಯವರೆಗೆ ಈ ವಿಚಾರದಲ್ಲಿ ಎಚ್ಚೆತ್ತುಕೊಳ್ಳುವುದಿಲ್ಲ, ಅಲ್ಲಿಯವರೆಗೆ ಕಾನೂನಿದ್ದರೂ ಸಹ ಇದನ್ನು ಜಾರಿಗೆ ತರುವುದಕ್ಕಾಗುವುದಿಲ್ಲವೆಂದು ಸರ್ಕಾರ ಭಾವಿಸಿದೆಯೇ?

ಶ್ರೀ ಎನ್. ರಾಚಯ್ಯ.— ಸಾಮಾಜಿಕ ಜಾಗೃತಿಯು ಮೂಲಕ ಇದು ಆಗುತ್ತದೆ ಮತ್ತು ಇದಕ್ಕೆ ಕಾನೂನಿನ ಬೆಂಬಲವೂ ಅಗತ್ಯ ; ಇವೆರಡೂ ಸಹ ಇಲ್ಲಿ ಮುಖ್ಯ ; ಇವೆರಡರ ಮೂಲಕ ಪ್ರಾಮಾಣಿಕವಾದಂಥ ಪ್ರಯತ್ನ ಮಾಡಿದ್ದೇ ಆದರೆ ಈ ಒಂದು ಕಳಂಕವನ್ನು ತೊಡೆದು ಹಾಕಬಹುದು.

Smuggling of foodgrains from Gangapur to Maharashtra

755. SRI NAZEER AHMED SIDDIQUI (Raichur).— Will the Chief Minister be pleased to state.—

(a) whether they are aware that last year three lorries and twenty seven carts were seized by the Deputy Commissioner, Gulbarga, while smuggling foodgrains from Gangapur to Maharastra;